ಚೇರ್ಮನ್ನರಿಗೆ ಎಂಎಲ್ಲೆಯಿಂದ ಫೋನ್ ಬಂತು. ಒಂದೆರಡು ಮಾತಾಡಿ ಫೋನನ್ನು ಇನ್‌ಸ್ಪೆಕ್ಟರಿಗೆ ಕೊಟ್ಟರು.

'ನಮಸ್ಕಾರ್ರಿ ಸರ... ಬ್ಯಾರೆ ಧರ್ಮದೋರು, ಎಸ್‌ಸಿಗಳು ಕೆರೆಯೊಳಕ್ಕೆ ಇಳಿಯಂಗಿಲ್ಲಂತ್ರಿ... ಹಂಗಂತ ಪಂಚಾಯ್ತಿಯೋರು ರೆಸಲ್ಯೂಷನ್ ಪಾಸ್ ಮಾಡ್ಯಾರಂತ... ನಾ ಕ್ರಿಶ್ಚಿಯನ್ ಅದೀನಿ. ಡ್ಯೂಟಿ ಮೇಲೆ ಬಂದಿರೋ ಪೀಸಿಗಳಲ್ಲಿ ಒಬ್ಬ ಮಹಮಡನ್ ಅದಾನ. ಮತ್ತೊಬ್ಬಾಂವ ಎಸ್‌ಸಿ. ಇನ್ನೊಬ್ಬಂಗ ಎಪಿಲೆಪ್ಸಿ ಐತಿ. ಮತ್ತೊಬ್ಬಾವ್ನ ಸೆರೆ ಕುಡದು ಟೊಳ್ಳಾಗ್ಯಾನ. ಅವ್ನ ಮುಂದಿನ ಜೂನ್‌ಗಾದ ರಿಟೈರ್ ಆಗಲಿಕ್ಕತ್ಯಾನ... ನಾನರ ಏನ ಮಾಡ್ಲಿ? ನೀವ ಹೇಳ್ರಿ ಸಾಹೇಬರ...' ಎನ್ನುತ್ತ ತಮ್ಮ ಅಸಹಾಯಕತೆಯನ್ನು ಹೇಳಿಕೊಂಡರು. 'ಇಲ್ಲಿ ಡ್ಯೂಟಿಗೆ ಅಂತ ಬಂದಿರೊ ನಾಲ್ಕೂ ಮಂದಿಗೂ ಈಜು ಬರಲ್ರಿ... ನೀವ ಹೇಳಿದ್ರಿ ಅಂತ ಅವರನ್ನು ತೆಪ್ಪದಲ್ಲಿ ಕಳಿಸ್ತೀನ್ರಿ... ಏನಾದರೂ ಹೆಚ್ಚು ಕಮ್ಮಿ ಆದ್ರ ನೀವೇ ಜವಾಬ್ದಾರಿ' ಅಂತ ಮಾರ್ಕ್ ಸಾಹೇಬರು ಎಂಎಲ್ಲೆಗೆ ಹೇಳಿದರಲ್ಲದೆ, 'ನಮ್ಮ ಕಷ್ಟ ಏನು ಅಂತ ಚೇರ್ಮನ್ನರಿಗೂ ಗೊತ್ತಾಗಲಿ, ನೀವ ಅವರಿಗಷ್ಟ ಹೇಳ್ರಿ' ಅನ್ನುತ್ತ ಫೋನನ್ನು ಚೇರ್ಮನ್ನರಿಗೆ ಕೊಟ್ಟರು. ಆ ಮೇಲೆ ಎಂಎಲ್ಲೆ ಚೇರ್ಮನ್ನರ ಜತೆ ಮಾತಾಡಿದರು. ಎಂಎಲ್ಲೆ ಹೇಳಿದ್ದನ್ನು ಚೇರ್ಮನ್ನರು ಸುಮ್ಮನೆ ಕೇಳಿಸಿಕೊಳ್ಳಬೇಕಾಯಿತು.

ಆಮೇಲೆ ಹತ್ತು ನಿಮಿಷ ಸಿಐ ಜತೆ ಮಾತಾಡಿದರು. 'ಅದೇನೊ ಪೆಪ್ಸಿ ಅಂದ್ರಲ್ಲ ಏನು' ಅಂತ ಚೇರ್ಮನ್ನರು ಕೇಳಿದರು. 'ಅದು ಪೆಪ್ಸಿ ಅಲ್ರಿ, ಎಪಿಲೆಪ್ಸಿ. ಅಂದ್ರ ಮೂರ್ಛೆರೋಗ' ಅಂತ ವಿವರಿಸಿದರು. ನಾಲ್ಕೂ ಜನ ಕಾನ್‌ಸ್ಟೆಬಲ್‌ಗಳಿಗೆ ತಲೆಗೆ ಐದು ಸಾವಿರ, ಮಾರ್ಕ್ ಸಾಹೇಬರಿಗೆ ಹತ್ತು ಸಾವಿರ ಕೊಡುವುದಕ್ಕೆ ಚೇರ್ಮನ್ನರು ಒಪ್ಪಬೇಕಾಯಿತು.

'ಕೊರೊನಾ ಟೆಸ್ಟ್ ಮಾಡಿಸಲು ಹೆಣಗಳನ್ನು ತಾಲ್ಲೂಕು ಆಸ್ಪತ್ರೆಗೆ ನಿಮ್ಮ ಜೀಪಲ್ಲೇ ಒಯ್ಯಬೇಕು. ಟೆಸ್ಟ್ ಮಾಡೋರಿಗೆ ರೊಕ್ಕ ಕೊಡಬೇಕು. ಬೇವರ್ಸಿ ಹೆಣಗಳಾದರೆ ಅವನ್ನ ಮಣ್ಣ ಮಾಡೋಕು ನೀವ ರೊಕ್ಕ ಕೊಡಬೇಕು ಅದು ನಿಮ್ದು ರೆಸ್ಪಾನ್ಸಿಬಲಿಟಿ. ಹೆಣಗಳ ಜತಿಗೆ ಇಬ್ಬರು ಪೀಸಿಗಳು ಬರ್ತಾರ ಅವರ ಚಾ, ಪಾನಿ ಖರ್ಚ ನೀವ ನೋಡಿಕೊಬೇಕು' ಅಂತ ಮಾರ್ಕ್ ಸಾಹೇಬರು ಮುಚ್ಚುಮರೆ ಇಲ್ಲದೆ ಹೇಳಿಬಿಟ್ಟರು.

ಮೂರು ಗಂಟೆಯ ಹೊತ್ತಿಗೆ ಹೆಣಗಳನ್ನು ಹೊರಕ್ಕೆಳೆದು ತರುವ ಕೆಲಸ ಆರಂಭವಾಯಿತು. ಇಬ್ಬರು ಪೀಸಿಗಳು ಒಂದು ತೆಪ್ಪದಲ್ಲಿ. ಇನ್ನೊಂದರಲ್ಲಿ ಹಗ್ಗಗಳು, ಉದ್ದನೆಯ ಐದಾರು ಗಳ, ಕುಡುಗೋಲು ಇತ್ಯಾದಿ ಹತಾರಗಳನ್ನು ಇಟ್ಟುಕೊಂಡು ಇನ್ನೊಬ್ಬ ಪೀಸಿ ಹೋಗಲು ರೆಡಿಯಾದರು. ತೆಪ್ಪದಲ್ಲಿ ಕೂತ ಪೀಸಿಗಳು ಉದ್ದನೆ ಗಳಗಳನ್ನು ನೆಲಕ್ಕೆ ಅದುಮಿ ಮೀಟುತ್ತ ಹೆಣಗಳಿದ್ದ ಜಾಗದತ್ತ ನಿಧಾನವಾಗಿ ಚಲಿಸಿದರು.

ತೆಪ್ಪಗಳು ಅರ್ಧ ದಾರಿಗೆ ಹೋದ ಮೇಲೆ ಪೀಸಿಗಳು ತಮ್ಮ ಮೊಬೈಲ್‌ಗಳನ್ನು ಒಯ್ದಿಲ್ಲ ಎನ್ನುವುದು ಗೊತ್ತಾಯಿತು. 'ಒಂದಾದರೂ ಮೊಬೈಲನ್ನು ಅವರು ಜತೆಯಲ್ಲಿ ಒಯ್ಯಬೇಕಿತ್ತು' ಅಂತ ಎಲ್ಲರಿಗೂ ಕೇಳುವಂತೆ ಹೇಳಿಕೊಂಡು ಮಾರ್ಕ್ ಸಾಹೇಬರು ಪೇಚಾಡಿದರು. ಏರಿಯ ಮೇಲೆ ನಿಂತ ಜನರಲ್ಲಿ ಕ್ಷಣ ಕ್ಷಣಕ್ಕೆ ಕುತೂಹಲ ಹೆಚ್ಚುತ್ತ ಹೋಯಿತು. ತೆಪ್ಪ ನಡೆಸುವ ಅಭ್ಯಾಸ ಯಾರಿಗೂ ಇಲ್ಲದ್ದರಿಂದ ಅತ್ತಇತ್ತ ಸರಿದು ಕೂರುತ್ತ ಬ್ಯಾಲನ್ಸ್ ಮಾಡುತ್ತ ಹೋಗಬೇಕಾಯಿತು. ತೆಪ್ಪಗಳು ಹೆಣಗಳಿದ್ದ ಕೆರೆಯ ಮಧ್ಯಭಾಗಕ್ಕೆ ಹೋಗಲು ಮುಕ್ಕಾಲು ಗಂಟೆ ಹಿಡಿಯಿತು. ಏರಿಯ ಮೇಲೆ ನಿಂತಿದ್ದ ಜನ ಉಸಿರು ಬಿಗಿ ಹಿಡಿದು ಪೊಲೀಸರ ಕಾರ್ಯಾಚರಣೆ ನೋಡುತ್ತಿದ್ದರು.

ಹೆಣಗಳ ಸುತ್ತ ಒಂದು ರೌಂಡು ಹೊಡೆದ ಮೇಲೆ ಒಂದು ತೆಪ್ಪದಲ್ಲಿದ್ದ ಪೀಸಿಯೊಬ್ಬ ಎರಡೂ ಕೈಗಳನ್ನು ಮೇಲಕ್ಕೆತ್ತಿ, ಅತ್ತಿತ್ತ ಬೀಸುತ್ತಾ ಏನನ್ನೋ ಕೂಗಿ ಹೇಳಿದ. ಅದು ಕೆರೆ ದಂಡೆಯಲ್ಲಿದ್ದವರಿಗೆ